**PW**2

# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ ನ್ಯಾಯಾಲಯ, ಸುಳ್ಯ, ದ.ಕ

## **M.V.C.No.**1656/2023

| | |
|---|---|
| ಹೆಸರು | :ಮಹೇಶ್ |
| ತಂದೆಯ ಹೆಸರು | :ಮೋಹನ್ ರಾಜ್ |
| ಪ್ರಾಯ | :46 ವರ್ಷ |
| ಉದ್ಯೋಗ | :ವರ್ಕ್ ಶಾಪ್ ಮಾಲೀಕರು |
| ವಾಸ | :ಕಣ್ಣೂರು, ಕೇರಳ |

**ದಿನಾಂಕ 18.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಪಿ.ಕೆ.ಪಿ ರವರಿಂದಃ**

ನಾನು ಕೇರಳ ಕಣ್ಣೂರಿನಲ್ಲಿ ಇ.ಎಸ್.ಎಸ್.ಎಂ ಟ್ರಾವೆಲ್ ಡಿಸೈನಿಂಗ್ ಎಂಬ ಹೆಸರಿನಲ್ಲಿ ಎಲ್ಲಾ ಮಾದರಿಯ ಟೆಂಪೋ ಟ್ರಾವಲ್ಲರ್ ಮತ್ತು ಆಂಬ್ಯೂಲೆನ್ಸ್‌ಗಳ ಬಾಡಿ ಮೇಕಿಂಗ್ ಮತ್ತು ಇಂಟೀರಿಯರ್ ಡಿಸೈನ್ ಮತ್ತು ಅವುಗಳ ರಿಪೇರಿ ಕೆಲಸ ಮಾಡಿಕೊಂಡಿರುತ್ತೇನೆ. ಈ ಪ್ರಕರಣದಲ್ಲಿ ಅಪಘಾತದಲ್ಲಿ ಜಖಂ ಆಗಿದ್ದ ಕೆಎ-21-ಸಿ-1122 ನಂಬರಿನ ಆಂಬ್ಯುಲೆನ್ಸ್ ಅನ್ನು ಅರ್ಜಿದಾರರು ಡಿಸೆಂಬರ್ 2022 ರಂದು ನಮ್ಮ ಗ್ಯಾರೇಜ್ ಗೆ ರಿಪೇರಿಗಾಗಿ ಬಿಟ್ಟಿದ್ದು, ನಾನು ಸದರಿ ವಾಹನದ ಇಂಜಿನ್ ಮತ್ತು ಬಾಡಿಯ ರಿಪೇರಿ ಕೆಲಸಗಳನ್ನು ಮಾಡಿರುತ್ತೇನೆ. ಸದರಿ ವಾಹನದ ಒಟ್ಟು ರಿಪೇರಿಗಾಗಿ ಸುಮಾರು ರೂ.1,94,000/- ಹಣ ಖರ್ಚಾಗಿರುತ್ತದೆ. ಸದರಿ ಹಣವನ್ನು ಅರ್ಜಿದಾರರು ನನಗೆ ಪಾವತಿ ಮಾಡಿರುತ್ತಾರೆ. ಈ ಬಗ್ಗೆ ನಾನು ರಶೀದಿಗಳನ್ನು ನೀಡಿದ್ದು

ಸದರಿ ರಶೀದಿಗಳನ್ನು ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಅವುಗಳನ್ನು ಈಗಾಗಲೇ ನಿಪಿ–9 ಎಂದು ಗುರುತಿಸಲಾಗಿದೆ. ಸದರಿ ದಾಖಲೆಗಳಲ್ಲಿ ಸಾಕ್ಷಿಯ ಸಹಿಗಳನ್ನು ನಿಪಿ–9(ಎ) ಮತ್ತು 9(ಬಿ) ಎಂದು ಗುರುತಿಸಲಾಯಿತು. ನಮ್ಮ ಗ್ಯಾರೇಜ್ ಸುಳ್ಯದಿಂದ 120 ಕಿ.ಮೀ ದೂರದಲ್ಲಿದೆ.

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಯು.ಎಸ್.ಎನ್ ವಕೀಲರಿಂದಃ**

ನಮ್ಮ ಗ್ಯಾರೇಜ್ ಗೆ ಲೈಸೆನ್ಸ್ ಪಡೆದುಕೊಂಡಿರುತ್ತೇನೆ. ನಾವು ನೀಡುವ ಬಿಲ್ಲುಗಳಿಗೆ ಜಿ.ಎಸ್.ಟಿ ಪಾವತಿ ಮಾಡುವುದಿಲ್ಲ. ನಿಪಿ–9 ರಲ್ಲಿ ನಮ್ಮ ಗ್ಯಾರೇಜ್ ನ ಲೈಸೆನ್ಸ್ ನಂಬರ್ ಮತ್ತು ಜಿ.ಎಸ್.ಟಿ ನಂಬರ್ ತೋರಿಸಿರುವುದಿಲ್ಲ. ನಮ್ಮ ಗ್ಯಾರೇಜ್ ನಲ್ಲಿ ವಾಹನಗಳ ರಿಪೇರಿ ಮಾತ್ರ ಮಾಡುತ್ತೇವೆ ಎಂದರೆ ಸರಿ. ವಾಹನಗಳಿಗೆ ಬೇಕಾದ ಬಿಡಿಭಾಗಗಳನ್ನು ಶೋರೂಂ ನಿಂದ ಖರೀದಿಸುತ್ತೇನೆ. ಬಿಡಿಭಾಗಗಳನ್ನು ಖರೀದಿ ಮಾಡಿದ ಬಗ್ಗೆ ನನ್ನ ಬಳಿ ರಶೀದಿಗಳು ಇರುವುದಿಲ್ಲ. ನಾನು ರಿಪೇರಿ ಮಾಡಿದ ವಾಹನದ ಸರ್ವೆ ವರದಿಯನ್ನು ನೋಡಿರುವುದಿಲ್ಲ. ಅದು ಆಂಬ್ಯುಲೆನ್ಸ್ ಆಗಿದ್ದ ಕಾರಣಕ್ಕೆ ಬೇಗ ರಿಪೇರಿ ಮಾಡಿ ಕಳುಹಿಸಿರುತ್ತೇನೆ. ರಿಪೇರಿ ಕುರಿತು ಹಣ ಪಾವತಿ ಮಾಡಿದ ಬಗ್ಗೆ ಅರ್ಜಿದಾರರಿಗೆ ನಾನು ರಶೀದಿಯನ್ನು ನೀಡಿರುವುದಿಲ್ಲ. ನಿಪಿ–9 ರಲ್ಲಿ ನಮೂದು ಮಾಡಿದ ಬಿಡಿಭಾಗಗಳನ್ನು ಅರ್ಜಿದಾರರ ವಾಹನಕ್ಕೆ ಅಳವಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಇ.ಎಸ್.ಎಸ್.ಎಂ ಟ್ರಾವೆಲ್ ಡಿಸೈನಿಂಗ್ ಎಂಬ ಹೆಸರಿನ ಕಂಪನಿಯನ್ನು ನಾನು ನಡೆಸುತ್ತಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿದಾರರ ವಾಹನವನ್ನು ರಿಪೇರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಕೋರಿಕೆಯ ಮೇರೆಗೆ ನಿಪಿ–9 ರಂತೆ ಸುಳ್ಳು ದಾಖಲೆಗಳ ಆಧಾರದ ಮೇರೆಗೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–9 ನ್ನು ನಾನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ